

## ಸೀಬೆ ಸ್ಮೂದಿ

ಏನೇನು ಬೇಕು?

ಹಣ್ಣಾದ ಸೀಬೆ, ಬಾಳೆಹಣ್ಣು ತಲಾ ಒಂದೊಂದು
ಹಾಲು ಒಂದು ಕಪ್
ಖರ್ಜೂರ ನಾಲ್ಕು
ಸಕ್ಕರೆ ರುಚಿಗೆ ಬೇಕಷ್ಟು
ಗುಲ್ಕನ್ ಒಂದು ಚಮಚ
ಮಂಜುಗಡ್ಡೆ ಪುಡಿ ಕಾಲು ಕಪ್
ಐಸ್‌ಕ್ರೀಮ್ ಅರ್ಧ ಕಪ್

ಮಾಡೋದು ಹೇಗೆ?

ಸೀಬೆಹಣ್ಣಿನ ಬೀಜ ಬೇರ್ಪಡಿಸಿ ತಿರುಳನ್ನು ರುಬ್ಬಿ. ನಂತರ ಇದಕ್ಕೆ ಬಾಳೆಹಣ್ಣು, ಖರ್ಜೂರ, ಗುಲ್ಕನ್, ಹಾಲು, ಐಸ್ಕ್ರೀಂ ಸೇರಿಸಿ, ರುಬ್ಬಿ ಸರ್ವಿಂಗ್ ಕಪ್‌ಗೆ ಸುರಿದು ಐಸ್‌ಪೀಸ್ ಸೇರಿಸಿ, ಮೇಲಿನಿಂದ ತುಪ್ಪದಲ್ಲಿ ಹುರಿದ ಬಾದಾಮಿ ತರಿಯನ್ನು ಉದುರಿಸಿ ಸರ್ವ್ ಮಾಡಿ.

## ಸೀಬೆಯ ಚಾಟ್

ಏನೇನು ಬೇಕು?

ಹೆಚ್ಚಿದ ಸೀಬೆ, ಸೇಬು, ದಾಳಿಂಬೆ, ಸ್ವೀಟ್‌ಕಾರ್ನ್, ಕ್ಯಾರೆಟ್‌ತುರಿ ತಲಾ ನಾಲ್ಕು ಚಮಚ
ಖರ್ಜೂರ ಒಂದು ಚಮಚ
ಹುರಿದ ಕಾರ್ನ್‌ಫ್ಲೇಕ್ಸ್ ಐದು ಚಮಚ
ಹುರಿದ ಶೇಂಗಾ ಮೂರು ಚಮಚ
ಹುರಿದ ಹೆಸರುಬೇಳೆ ನಾಲ್ಕು ಚಮಚ
ಹುರಿದ ಅಗಸೆಬೀಜ. ಹೆಚ್ಚಿದ ಕೊತ್ತಂಬರಿಸೊಪ್ಪು ತಲಾ ಎರಡು ಚಮಚ
ಟೊಮ್ಯಾಟೊ ಮೂರು ಚಮಚ
ನೀರುಳ್ಳಿ ನಾಲ್ಕು ಚಮಚ
ಲಿಂಬೆರಸ, ಚಾಟ್‌ಪೌಡರ್ ತಲಾ ಒಂದೊಂದು ಚಮಚ
ಕೆಂಪುಮೆಣಸಿನ ಪುಡಿ ಮತ್ತು ಉಪ್ಪು ರುಚಿಗೆ

ಮಾಡೋದು ಹೇಗೆ?

ಬಾಣಲೆಯಲ್ಲಿ ಸ್ವಲ್ಪ ಎಣ್ಣೆ ಹಾಕಿ ಕಾರ್ನ್‌ಫ್ಲೇಕ್ಸ್ ಹುರಿದು ಮಿಕ್ಸಿಂಗ್ ಬೌಲ್ಸ್‌ಗೆ ಹಾಕಿ. ನಂತರ ಇದಕ್ಕೆ ಹುರಿದ ಶೇಂಗಾ, ಖಾರಪುಡಿ, ಚಾಟ್‌ಪೌಡರ್, ಉಪ್ಪು ಮತ್ತು ಕಾಳುಮೆಣಸಿನಪುಡಿ ಸೇರಿಸಿಕೊಂಡು ಸ್ವೀಟ್ ಕಾರ್ನ್ ಅನ್ನು ಬೆಣ್ಣೆಯಲ್ಲಿ ಬಾಡಿಸಿಕೊಳ್ಳಿ. ಹೆಚ್ಚಿದ ಸೀಬೆ, ಸೇಬು, ಖರ್ಜೂರ, ಕ್ಯಾರೆಟ್‌ತುರಿ, ದಾಳಿಂಬೆ, ಟೊಮ್ಯಾಟೊ, ನೀರುಳ್ಳಿ ಇವುಗಳನ್ನು ಮಿಕ್ಸಿಂಗ್‌ಬೌಲ್‌ಗೆ ಹಾಕಿ ಚಾಟ್ ಪೌಡರ್, ಖಾರಪುಡಿ ಮತ್ತು ಉಪ್ಪು ಸೇರಿಸಿ ಮಿಶ್ರಮಾಡಿ. ಉಳಿದ ಎಲ್ಲ ವಸ್ತುಗಳನ್ನು ಹಾಕಿ ಮಿಕ್ಸ್ ಮಾಡಿ.





## ಸೀಬೆ ರಾಯತ

ಏನೇನು ಬೇಕು?

ಬೀಜ ತೆಗೆದು ಸಣ್ಣಗೆ ಹೆಚ್ಚಿದ ಸೀಬೆ ಆರು ಚಮಚ
ಸಿಪ್ಪೆ ತೆಗೆದು ಸಣ್ಣಗೆ ಹೆಚ್ಚಿದ ಸೌತೆಕಾಯಿ ಆರು ಚಮಚ
ದಾಳಿಂಬೆ ಆರು ಚಮಚ
ಸೇಬು ಚೂರುಗಳು ನಾಲ್ಕು ಚಮಚ
ಕೊತ್ತಂಬರಿಸೊಪ್ಪು ಒಂದು ಚಮಚ
ನೀರುಳ್ಳಿ ನಾಲ್ಕು ಚಮಚ
ಟೊಮ್ಯಾಟೊ ನಾಲ್ಕು ಚಮಚ
ಸಿಹಿಮೊಸರು ಒಂದು ಕಪ್
ದ್ರಾಕ್ಷಿ ಹಣ್ಣು ಎರಡು ಚಮಚ
ಕೆಂಪುಮೆಣಸಿನ ಪುಡಿ ಮತ್ತು ಉಪ್ಪು ರುಚಿಗೆ ಬೇಕಷ್ಟು.

ಮಾಡೋದು ಹೇಗೆ?

ಮೇಲೆ ತಿಳಿಸಿದ ಎಲ್ಲಾ ಸಾಮಗ್ರಿಗಳನ್ನು ಮಿಕ್ಸಿಂಗ್ ಬೌಲ್‌ಗೆ ಹಾಕಿ ಚೆನ್ನಾಗಿ ಮಿಶ್ರ ಮಾಡಿ, ಕೊತ್ತಂಬರಿಸೊಪ್ಪಿನಿಂದ ಅಲಂಕರಿಸಿ ಸರ್ವ್ ಮಾಡಿ.